**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊಳೆನರಸೀಪುರ**

ಫ್ರಾಸ –01

**CC No**: 41/2020 ಚಾಸ- 01

| | |
|---|---|
| ಹೆಸರು | **ಚಿಕ್ಕಯ್ಯ** |
| ತಂದೆ/ಗಂಡನ ಹೆಸರು | **ದೊಡ್ಡಯ್ಯ** |
| ವಯಸ್ಸು | **68 ವರ್ಷ** |
| ಉದ್ಯೋಗ | **ವ್ಯವಸಾಯ** |
| ವಾಸಸ್ಥಳ | ದೇವರಮುದ್ದನಹಳ್ಳಿ |

ದಿನಾಂಕಃ 25.07.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಸ.ಸ.ಅ ರವರಿಂದಃ-**

ಸುಮಾರು 6 ವರ್ಷಗಳ ಹಿಂದೆ ರಾತ್ರಿ ನನ್ನ 12 ಕುರಿಗಳು ಕಳ್ಳತನವಾಗಿದ್ದು. ಬೆಳಗ್ಗೆ ಎದ್ದು ನೋಡಿದಾಗ ಕಳ್ಳತನವಾದ ವಿಷಯ ಗೊತ್ತಾಗಿ ಪೊಲೀಸ್ ಠಾಣೆಗೆ ದೂರು ಕೊಟ್ಟೆ. ಯಾರು ಕಳ್ಳತನ ಮಾಡಿರುತ್ತಾರೆ ಎಂದು ಪೊಲೀಸರು ನನಗೆ ಹೇಳಲಿಲ್ಲ ಮತ್ತು ಯಾರನ್ನೂ ಸಹಾ ನನಗೆ ತೋರಿಸಿಲ್ಲ. ದೂರು ಕೊಟ್ಟ ನಂತರ ಪೊಲೀಸರು ಮತ್ತೆ ಯಾವತ್ತೂ ನಮ್ಮ ಮನೆಯ ಕಡೆಗೆ ಬಂದಿಲ್ಲ ಮತ್ತು ಯಾವುದೇ ಹೇಳಿಕೆಯನ್ನು ಪಡೆದಿಲ್ಲ. ಸಾಕ್ಷಿ ದೂರು ಮತ್ತು ಮಹಜರ್ ಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ, ದೂರನ್ನು ನಿಪಿ.1 ಎಂದು, ಸಾಕ್ಷಿದಾರರ ಸಹಿಯನ್ನು ನಿಪಿ.1(ಎ) ಎಂದು, ಮಹಜರ್ ಅನ್ನು ನಿಪಿ.2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು.

ದೂರನ್ನು ನನ್ನ ಅಣ್ಣ ಕಾಳಯ್ಯರವರು ಬರೆದುಕೊಟ್ಟಿರುತ್ತಾರೆ. ನಿಪಿ.2 ಅನ್ನು ಎಲ್ಲಿ ಯಾವಾಗ ಮತ್ತು ಯಾವ ಕಾರಣಕ್ಕಾಗಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಿಪಿ.2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅಭಿಯೋಜಕರು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀಸವಾಲು ಸ.ಸ.ಅಭಿಯೋಜಕರಿಂದಃ**

ದಿನಾಂಕಃ 01.07.2019 ರಂದು ರಾತ್ರಿ 12-00 ಗಂಟೆಯ ಸಮಯದಲ್ಲಿ ನನ್ನ 10 ಕುರಿಗಳು ಕಳ್ಳತನವಾಗಿದ್ದವು ಎಂದರೆ ಸರಿ. ದಿಃ 01.07.2019 ರಂದು ಸಂಜೆ 6-00 ಗಂಟೆಗೆ ನಾನು ಅವುಗಳನ್ನು ಮೇಯಿಸಿ ಮನೆಯಲ್ಲಿ ಕೂಡು ಹಾಕಿದ್ದು, ಮಧ್ಯ ರಾತ್ರಿ ಯಾರೋ ಕಳ್ಳತನ ಮಾಡಿಕೊಂಡು ಹೋಗಿರುತ್ತಾರೆ ಎಂದು ನಿಪಿ.1 ರಂತೆ ದೂರು ಕೊಟ್ಟಿದ್ದೆ ಎಂದರೆ ಸರಿ.

ನಂತರ 02.07.2019 ರಂದು ಪೊಲೀಸರು ನಮ್ಮ ಮನೆಯ ಹತ್ತಿರ ಬಂದು ನನ್ನ ವಾಸದ ಮನೆಗೆ ಲಗತ್ತಾಗಿ ಉತ್ತರ ಭಾಗದ ಕೊಠಡಿಯ ಮುಂದೆ ಪಂಚರಾದ ಚಾಸಾ 2 ಮತ್ತು 3 ರವರ ಸಮಕ್ಷಮ ನಾನು ತೋರಿಸಿದ ಜಾಗದಲ್ಲಿ ನಿಪಿ.2 ರಂತೆ ಸ್ಥಳ ಮಹಜರ್ ಮಾಡಿದರು ಎಂದರೆ ಸರಿಯಲ್ಲ. ಸ್ಥಳ ಮಹಜರ್ ಅನ್ನು ಬೆಳಗ್ಗೆ 11-30 ರಿಂದ 12-30 ಗಂಟೆಯವರೆಗೆ ಸ್ಥಳದಲ್ಲಿ ಲ್ಯಾಪ್ ಟಾಪ್ ನಲ್ಲಿ ಟೈಪ್ ಮಾಡಿ, ನಂತರ ಪ್ರಿಂಟ್ ತೆಗೆದು ನನಗೆ ಓದಿ ಹೇಳಿ ನನ್ನ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ.

ನಂತರ ದಿಃ 04.01.2020 ರಂದು ನನ್ನನ್ನು ಹಾಸನದ ಗ್ರಾಮಂತರ ವೃತ್ತ ನಿರೀಕ್ಷಕರು ತಮ್ಮ ಕಚೇರಿಗೆ ಕರೆಯಿಸಿ 1 ರಿಂದ 3ನೇ ಆರೋಪಿತರನ್ನು ಹಾಗೂ ಕಳ್ಳತನಕ್ಕೆ ಬಳಸಲಾದ ವಾಹನ ಸಂಖ್ಯೆಃ ಕೆಎ-09-ಎನ್-1703 ಹಾಗೂ ಕೆಎ-04-ಎಂ.ಸಿ.-0800 ನೇದ್ದವುಗಳನ್ನು ತೋರಿಸಿದರು ಎಂದರೆ ಸರಿಯಲ್ಲ. ಆರೋಪಿತರು ಮ ಧ್ಯರಾತ್ರಿ ನಮ್ಮ ಕೊಟ್ಟಿಟಗೆಯ ಬಾಗಿಲಿನ ಬೀಗವನ್ನು ಮೀಟಿ ಕೊಟ್ಟಿಗೆಯಲ್ಲಿದ್ದ 5 ಕುರಿ ಮತ್ತು 5 ಕುರಿ ಮರಿಗಳನ್ನು ಕಳ್ಳತನ ಮಾಡಿಕೊಂಡು ಕಾರಿನಲ್ಲಿ ತುಂಬಿಸಿಕೊಂಡು ಹೋಗಿ ಮರುದಿನ ಅರಕಲಗೂಡಿನ ಹೆತ್ತಗೌಡನಹಳ್ಳಿಯ ಸಂತೆಯಲ್ಲಿ 25,000/- ಗಳಿಗೆ ಮಾರಾಟ ಮಾಡಿ ಹಣವನ್ನು ಹಂಚಿಕೊಂಡು ಖರ್ಚು ಮಾಡಿಕೊಂಡಿರುತ್ತಾರೆ ಎಂದು ಪೊಲೀಸರು ನನಗೆ ಹೇಳಿದರು ಎಂದರೆ ಸರಿಯಲ್ಲ. ಅಲ್ಲದೇ ಪೊಲೀಸ್ ಠಾಣೆಯ ಆವರಣದಲಿಲ್ಲದ್ದ ಮೇಲೆ ಹೇಳಿದ ವಾಹನಗಳನ್ನು ಸಹಾ ಪೊಲೀಸರು ಅಮಾನತ್ತು ಪಡಿಸಿಕೊಂಡರು ಎಂದರೆ ಸರಿಯಲ್ಲ, ಎಲ್ಲಾ ವಿಷಯ ಗೊತ್ತಿದ್ದು, ಆರೋಪಿತರರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಪೊಲೀಸರು ವಿ.ಸಿ. ಯಲ್ಲಿ ಕಾಣುತ್ತಿರುವ ಆರೋಪಿಯನ್ನು ನನಗೆ ತೋರಿಸಿದರು ಎಂದರೆ ಸರಿಯಲ್ಲ.

**ಪಾಟೀಸವಾಲು 4ನೇ ಆರೋಪಿ ಪರ ವಕೀಲರಿಂದ :-**

ನನ್ನ ಯಾವುದೇ ಕುರಿಗಳು ಕಳ್ಳತನವಾಗಿಲ್ಲ, ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

ಓ. ಹೇ. ಕೇ. ಸ. ಇ. ಒ,

(ಶ್ರೀಮತಿ. ನಿವೇದಿತಾ ಮಹಾಂತೇಶ್ ಮುನವಳ್ಳಿಮಠ್)
ಹಿ.ವ್ಯ.ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ರವರು ಹೊಳೆನರಸೀಪುರ.